

'ನಾಳಿಂದ ನಾನು ಕೆಲಸಕ್ಕೆ ಬರಲ್ಲ ಆಂಟಿ...' ಅಂದಳು ಚಂದ್ರಿ. ಈ ಮಾತಿನ ನಿರೀಕ್ಷೆ ಅವಳ ಮದುವೆ ಗೊತ್ತಾದಾಗಿನಿಂದ ಇದ್ದೇ ಇತ್ತು.

'ಸರಿ ಬಿಡು. ಮದುವೆ ಮಾಡ್ಕೊಂಡು ಸುಖವಾಗಿರು' ಅಂದೆ ಹೃತ್ಪೂರ್ವಕವಾಗಿ. ಅವಳಿಗೆಂದು ತೆಗೆದಿರಿಸಿದ ಹೊಸ ಸ್ಟೀಲ್ ತಟ್ಟೆಯಲ್ಲಿ ಹೊಸ ಸೀರೆ, ರವಿಕೆ ಕಣ, ಅರಿಶಿನ ಕುಂಕುಮದ ಚಿಕ್ಕ ಪ್ಯಾಕೆಟ್‌ಗಳು, ಅರ್ಧ ಡಜನ್ ಹಸಿರು ಬಳೆ, ಜೊತೆಗೆ ಐನೂರರ ನಾಲ್ಕು ನೋಟುಗಳು.

'ಕೂತ್ಕೋ' ಅಂದೆ. ಗೋಡೆಗೊರಗಿ ಕೂತಳು ಚಂದ್ರಿ. ನಾಳೆ ಬೆಳಗಾದರೆ ಮದುವಣಗಿತ್ತಿಯಾಗುವವಳು ಇರುವ ಹುಟ್ಟಾ ಇದು? ತೊಟ್ಟ ಹಳೆಯ ಚೂಡೀದಾರದ ಕೆಳಭಾಗ ಅರ್ಧಕ್ಕರ್ಧ ಒದ್ದೆಮುದ್ದೆ. 'ನೀರು ಕಂಡರೆ ನೀನು ಜಲಪಿಶಾಚಿ' ಅನ್ನುತ್ತಿದ್ದೆ. ಅವಳು ಪೋರ್ಟಿಕೊ ತೊಳೆದಳೆಂದರೆ ರಸ್ತೆಯ ಆ ತುದಿಯವರೆಗೂ ಹೋಗಿ ನಿಲ್ಲುತ್ತಿತ್ತು ನೀರು. 'ನಿನ್ನ ದೆಸೆಯಿಂದ ನೀರಿನ ಬಿಲ್ ಕಟ್ಟಿ ಸಾಕಾಯ್ತು. ಸ್ವಲ್ಪ ಕಡಿಮೆ ನೀರು ಹಾಕಿ ತೊಳೆಯೇ ಪುಣ್ಯಾತ್ಗಿತ್ತಿ. ಜನ ಬೈಕೋತಾರೆ...' ಅಂದರೆ, 'ಆಯ್ತು ಬಿಡಿ. ನಾಳೆಯಿಂದ ಹಂಗೇ ಮಾಡ್ತೀನಿ...' ಅನ್ನುತ್ತಿದ್ದಳೇ ವಿನಾ ಆ ನಾಳೆ ಬರುತ್ತಿರಲಿಲ್ಲ. ಕೆಲಸ ಮಾಡುತ್ತಿದ್ದಳೋ, ನೀರಲ್ಲಿ ಆಟ ಆಡುತ್ತಿದ್ದಳೋ ಅವಳಿಗೇ ಗೊತ್ತು. ನೀರಲ್ಲಿ ನೆಂದು ನೆಂದು ಕಾಲ್ಬೆರಳ ಸಂದುಗಳು ಬೆಳ್ಳಗಾಗಿದ್ದರೆ, ಮುಸುರೆ ಪಾತ್ರೆ ಉಜ್ಜಿ ಉಜ್ಜಿ ಕೈಬೆರಳ ಸಂದುಗಳ ಬಣ್ಣ ಬಿಳುಪಿಗೆ ತಿರುಗಿದೆ. ಎಷ್ಟೋ ಮನೆಗಳಲ್ಲಿ ಹೇಳುವುದನ್ನು ಕೇಳಿದ್ದೇನೆ, ಮನೆಕೆಲಸದವರು ಅಂದರೆ ಕಣ್ಣು ಮುಚ್ಚಿ ಬಿಡುವುದರೊಳಗೆ ಕೆಲಸ ಮುಗಿಸಿ ಮುಂದಿನ ಮನೆಗೆ ಹಾರುವ ಪೈಕಿ. ಅವಸರ ಇವಳ ಜಾಯಮಾನವಲ್ಲ. ಬೆಳಿಗ್ಗೆ ರಾಗಿ ಗಂಜಿ ಕುಡಿದು ಕೆಲಸಕ್ಕೆ ಹೊರಟರೆ ಬೇಗ ಮನೆ ಸೇರಿಕೊಳ್ಳಬೇಕೆಂಬ ಯಾವ ಧಾವಂತವೂ ಇವಳಿಗಿಲ್ಲ. 'ಎಷ್ಟು ಮನೆ ಕೆಲಸ ಮಾಡ್ತೀಯೇ?' ಅಂದರೆ ಒಂದೊಂದು ಸಲ ಒಂದೊಂದು ಲೆಕ್ಕ ಹೇಳುವಷ್ಟು ಬುದ್ಧಿವಂತೆ. ಮನೆಯೊಳಗೆ ಹೆಜ್ಜೆ ಇಡುತ್ತಿದ್ದಂತೆ 'ಟೈಮೆಷ್ಟು ಆಂಟಿ?' ಅನ್ನುವುದು ಮೊದಲ ಪ್ರಶ್ನೆ.

'ಗೋಡೆ ಮೇಲೆ ಅಷ್ಟು ದೊಡ್ಡಕ್ಕೆ ಗಡಿಯಾರ ಇದೆಯಲ್ಲೇ, ನೋಡ್ಕೋ' ಅಂದಿದ್ದೆ ಮೊದಲ ಸಲ.

'ನೋಡೋಕೆ ಬರಲ್ಲ ನಂಗೆ...'

'ಬರದಿದ್ರೆ ಕಲೀಬೇಕು. ಸ್ಕೂಲಿಗೆ ಹೋಗಿದ್ಯೋ, ಇಲ್ವೋ?'

ಅಡ್ಡಡ್ಡಕ್ಕೆ ತಲೆ ಆಡಿಸಿದ್ದಳು ಚಂದ್ರಿ. ಈ ಕಾಲದಲ್ಲೂ ಇಂತಹವರು ಇರುತ್ತಾರಾ? ಸರ್ಕಾರ ಕೊಡಮಾಡುವ ಸವಲತ್ತುಗಳನ್ನು ಉಪಯೋಗಿಸಿಕೊಂಡು ವಿದ್ಯೆ, ಬುದ್ಧಿ ಕಲಿತು ಎಂತಹವರೂ ನೌಕರಿಗೆ ಸೇರಿಕೊಳ್ಳುವ ಕಾಲಮಾನ ಇದು. ಕ್ರಮೇಣ ಒಂದೊಂದಾಗಿ ಅವಳ ಬದುಕಿನ ಪುಟಗಳು ತೆರೆದುಕೊಂಡಿದ್ದುವು, ಅವಳ ಬಾಯಿಂದಲೇ. ಹಿಂದಿದ್ದ ಕೆಲಸದವಳು ಕಾಯಿಲೆ ಬಿದ್ದು ಕೆಲಸಕ್ಕೆ ಬರುವುದು ಅಸಾಧ್ಯವಾದಾಗ ಅವಳು ತಂದು ಸೇರಿಸಿದ ಹುಡುಗಿ ಈ ಚಂದ್ರಿ. 'ದಡ್ಡಿ ಅಮ್ಮಾವ್ರೇ, ಹೇಳಿ ಕೆಲಸ ಮಾಡಿಸ್ಕೊಳ್ಳಿ' ಎನ್ನುವ ಉಪದೇಶದೊಂದಿಗೆ ನಮ್ಮ ಮನೆಯ ಹೊಸಿಲು ದಾಟಿ ಒಳಬಂದವಳು ಚಂದ್ರಿ. ಆಗ ನಮ್ಮ ಮಗಳು ಹೈಸ್ಕೂಲಿಗೆ ಸೇರಿಕೊಂಡಿದ್ದಳು ಮತ್ತು ಈಗ ಅವಳ ಮದುವೆಯಾಗಿ ಎರಡು ವರ್ಷ. ಅಂದರೆ ಚಂದ್ರಿ ಕೆಲಸಕ್ಕೆ ಸೇರಿ ಹೆಚ್ಚು ಕಡಿಮೆ ಹದಿನೈದು ವರ್ಷ. ಆಗಿಗೂ ಈಗಿಗೂ ಅವಳಲ್ಲಿ ಹೆಚ್ಚಿನ ವ್ಯತ್ಯಾಸವೇನಾಗಿಲ್ಲ. ಆಗ ಹೇಗಿದ್ದಳೋ ಈಗಲೂ ಹಾಗೇ ಇದ್ದಾಳೆ. ತೆಳ್ಳಗೆ, ಕುಳ್ಳಗೆ, ಸಾದುಗಪ್ಪಿನ ಸಾಧಾರಣ ಹುಡುಗಿ. 'ಎಷ್ಟೊರ್ಷ ನಿಂಗೆ?' ಎಂದು ಅವಳನ್ನು ಕೇಳುವುದು ದಂಡ. ಕಿವಿಯ ಮೇಲೆ ಬೀಳುತ್ತಿದ್ದ ಒಂದಿಷ್ಟು ಅಂಕಿಸಂಖ್ಯೆಗಳು ಅವಳ ಬಾಯಲ್ಲಿ ಚಲಾವಣೆಯಾಗುತ್ತಿದ್ದುವೇ ವಿನಾ ಅವುಗಳ ಬಗ್ಗೆ ನಿಖರ ಪರಿಜ್ಞಾನ ಇಲ್ಲವೇ ಇಲ್ಲ.

'ಎಷ್ಟಾಯ್ತು ಗಂಟೆ, ಒಂಬತ್ತಾ, ಹನ್ನೆರಡಾ?' ಎನ್ನುವಂತಾ ತಾಳಮೇಳವಿಲ್ಲದ ಪ್ರಶ್ನೆಗಳನ್ನು ಕೇಳಿ ಅವಳು ನಗೆಪಾಟಲಾಗಿದ್ದೂ ಇದೆ. ಒಂಬತ್ತಕ್ಕೂ, ಹನ್ನೆರಡಕ್ಕೂ ಮಧ್ಯೆ ಎಷ್ಟು ಗಂಟೆಗಳ ಅಂತರ ಇದೆ ಅನ್ನುವುದು ಅವಳ ಅರಿವಿಗೆ ದಕ್ಕುವಂಥದ್ದಲ್ಲ. ಒಂದನೆಯ ತಾರೀಕು ಸಂಬಳದ ದುಡ್ಡು ಕೊಟ್ಟರೆ ಸಣ್ಣಗೆ ಮಡಿಚಿ ಮಡಿಚಿ ಚೂಡೀದಾರದ ವೇಲ್‌ನ ತುದಿಯಲ್ಲಿ ಗಂಟು ಕಟ್ಟಿಕೊಳ್ಳುತ್ತಿದ್ದವಳನ್ನು ಕಂಡರೆ ಆ ನೋಟುಗಳ ದುಃಸ್ಥಿತಿಯ ಕುರಿತು ನನಗೇ ರಗಳೆ. ಹೊಸ ನೋಟುಗಳನ್ನು ಹಳೆಯ ನೋಟು ಮಾಡಿಕೊಳ್ಳುವ ಅವಳ ಪಿತ್ಥದ ಹಿಂದಿನ ಕಾರಣ ತಿಳಿದಾಗ ನನಗೆ ದಿಗ್ಭ್ರಮೆ. ಗರಿಗರಿಯಾದ ಹೊಸ ನೋಟುಗಳು ಅಂದರೆ ಕಳ್ಳನೋಟುಗಳು ಎಂದು ಟೀವಿಯಲ್ಲಿ ಬರುವ ಕೆಲ ಸಿನಿಮಾಗಳಿಂದ ಪಾಠ ಕಲಿತಿದ್ದ ಜಾಣೆ ಈ ಚಂದ್ರಿ. ಇಂತಹವಳು, ಕಾಲದ ಬಗ್ಗೆ ಯಾವ ಕಟ್ಟುಪಾಡುಗಳನ್ನೂ ಪಾಲಿಸದವಳು, ಪ್ರತಿ ದಿನ ಇಂತಾ ಹೊತ್ತಿಗೇ ಕೆಲಸಕ್ಕೆ ಬರುತ್ತಾಳೆ ಎನ್ನುವ ಯಾವ ನಿಯಮವೂ ಇರಲಿಲ್ಲ.

'ಒಂದೆರಡು ಗಂಟೆ ಹೆಚ್ಚು ಕಡಿಮೆ' ಎಂದು ಅಸಹನೆಯ ನಡುವೆಯೂ ಸಮಾಧಾನ ಹಚ್ಚಿಕೊಳ್ಳುವುದರ ಹಿಂದೆ ಒಂದು ಕಾರಣ ಇತ್ತು. ತಾಯಿಲ್ಲದ ತಬ್ಬಲಿ ಈ ಚಂದ್ರಿ. 'ತಾಯಿ ಇಲ್ಲ' ಅಂದರೆ ಬದುಕಿಲ್ಲ ಎನ್ನುವ ಅರ್ಥ ಅಲ್ಲ. ಕುಡುಕ ಗಂಡನ ಕಾಟ ತಾಳದೆ ಯಾರ ಹಿಂದೆಯೋ ಓಡಿ ಹೋಗಿದ್ದಳಂತೆ, ಎರಡು ವರ್ಷದ ಎಳೆಮಗುವನ್ನು ಬಿಟ್ಟು. ಈ ಎರಡು ವರ್ಷ ಅನ್ನುವುದೂ ಕೂಡಾ ಚಂದ್ರಿಯ ಬಾಯಿಂದ ಬಂದ ಪದಪುಂಜ. ಸತ್ಯವೂ ಇರಬಹುದು. ಅವರಿವರ ಬಾಯಿಂದ ಕೇಳಿದ್ದಿರಬಹುದು. ಅಪ್ಪ ಇನ್ನೊಂದು ಮದುವೆ ಮಾಡಿಕೊಂಡ. ಮನೆಗೆ ಮಲತಾಯಿ ಬಂದಳು. ಅವಳಿಗೂ ಗಂಡು, ಹೆಣ್ಣು ಎಂದು ಎರಡು ಮಕ್ಕಳಾದುವು. ಆ ಮಕ್ಕಳು ಶಿಸ್ತಾಗಿ ಶಾಲೆಗೆ ಹೋಗಿ, ಬಂದು ಓದಿಕೊಂಡಿದ್ದರೆ ಚಂದ್ರಿ ಮಲತಾಯಿಯ ಕೈಯಲ್ಲಿ ನುರುಪಡಿಯಾಗಿ ಅವರಿವರ ಮನೆಯಲ್ಲಿ ಗೆಯ್ಮೆಗೆ ನಿಂತಳು. ತಿಂಗಳು ತಿಂಗಳೂ ಚಿಕ್ಕಮ್ಮನ ಕೈಗೆ ಹಣ ತಂದೊಪ್ಪಿಸುವ ಅಕ್ಷಯಪಾತ್ರೆಯಾದಳು.

'ಇಷ್ಟು ಹೊತ್ತಿಗೆ ಈ ಮನೆಯ ಕೆಲಸ ಮುಗಿಸಿ ಬಿಡಬೇಕು' ಎನ್ನುವ ಧಾವಂತವಿಲ್ಲದ ಚಂದ್ರಿ ಅದೇನು ಹಾಗೆ ಕೆಲಸ ಮಾಡುವುದನ್ನು ರೂಢಿಸಿಕೊಂಡಿದ್ದಳೋ, ಅಥವಾ ಮನೆಗೆ ಹೋಗಿ ಮಾಡುವುದಕ್ಕೇನಿದೆ ಎನ್ನುವ ನಿರ್ಲಕ್ಷ್ಯದ ಧೋರಣೆಯೋ, ಕೆಲಸ ಮಾಡುವುದರಲ್ಲಿ ಬರೀ ಜಬ್ಬಿ. ಅವಳ ಕೆಲಸಕ್ಕೆ 'ಚೆನ್ನಾಗಿ' ಎನ್ನುವ ವಿಶೇಷಣ ಸೇರಿಸುವುದು ಒಪ್ಪತಕ್ಕಂತಾದ್ದಲ್ಲ. ಹೊತ್ತು ಮಾಡಿ ಕೆಲಸಕ್ಕೆ ಬಂದಳೆಂದು ಯಾವ